**1** ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ**,** ತುಮಕೂರು

**LAC.No.81/2022**

ಆರ್**.**ಡಬ್ಲ್ಯೂ**. 1**

ದಿನಾಂಕಃ **28.02.2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**.**

ಪಾಟೀ ಸವಾಲುಃ ಅರ್ಜಿದಾರರ ಪರ ಶ್ರೀ ಪಿ ಆರ್ ಜೆ ವಕೀಲರಿಂದಃ

1) ಅರ್ಜಿ ಸ್ವತ್ತಿನಲ್ಲಿ ಸ್ವಾಧೀನಪಡಿಸಿಕೊಂಡ ಜಮೀನು ತೋಟದ ಜಮೀನು ಅಂದರೆ ಸಾಕ್ಷಿಯು ಭಾಗಾಯ್ತು ಎಂದು ನುಡಿಯುತ್ತಾರೆ. ಚೇಳೂರು ಹೋಬಳಿ ಪೂರ್ಣ ಹೇಮವಾತಿ ನೀರಾವರಿ ಪ್ರದೇಶ ಅಂದರೆ ಸರಿ. ಭೂ ಸ್ವಾಧೀನಪಡಿಸಿಕೂಂಡ ಜಮೀನಿನ ಪಕ್ಕ ಎತ್ತಿನಹೊಳೆ ಮತ್ತು ಹೇಮವಾತಿ ಅಕ್ಕಪಕ್ಕ ಬರುತ್ತದೆ ಅಂದರೆ ಸ್ಪಷ್ಟ ಮಾಹಿತಿ ಇರುವುದಿಲ್ಲ. ಹೇಮಾವಾತಿ ಚಾನೆಲ್ ಇರುವುದರಿಂದ ಅರ್ಜಿ ಸ್ವತ್ತು ನೀರಾವರಿ ಜಮೀನು ಮತ್ತು ಫಲವತ್ತಾದ ಜಮೀನು ಅಂದರೆ ಇರಬಹುದು.

2) ಅವಾರ್ಡನ್ನು ವಿಶೇಷ ಭೂಸ್ವಾಧೀನಾಧಿಕಾರಿಗಳು ಮಾಡಿರುತ್ತಾರೆ, ಆದರೆ ನಾನು ದಾಖಲಾತಿಗಳ ಪ್ರಕಾರ ಅದನ್ನು ತಿಳಿದುಕೊಂಡಿರುತ್ತೇನೆ. ಅವಾರ್ಡ್ ಮಾಡುವ ಸಮಯದಲ್ಲಿ ತಾವು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ಮಾಡಿರುವುದಿಲ್ಲ ಅಂದರೆ ಸರಿ. ಅವಾರ್ಡ್ ತಾವು ಮಾಡದೇ ಇರುವ ಕಾರಣ ತಾವು ಸಾಕ್ಷ್ಯ ನುಡಿಯಲು ಅರ್ಹರಲ್ಲ ಅಂದರೆ ಸರಿಯಲ್ಲ. ಸಾಕ್ಷಿ

ಮುಂದುವರೆದು ದಾಖಲಾತಿಗಳ ಆಧಾರದ ಮೇಲೆ ನುಡಿಯುತ್ತೇನೆ. ಅವಾರ್ಡ್ ಮಾಡುವಾಗ ತೋಟಗಾರಿಕೆ ಇಲಾಖೆಯವರು ಸ್ಥಳ ಪರಿಶೀಲನೆ ಮಾಡಿರುವುದಿಲ್ಲ ಅಂದರೆ ಸರಿಯಲ್ಲ. ಅರ್ಜಿದಾರರಿಗೆ ಯಾವುದೇ ನೋಟೀಸ್ ನೀಡಿರುವುದಿಲ್ಲ, ಅವಾರ್ಡ್ ಮುಖಾಂತರ ಪರಿಹಾರದ ಹಣವನ್ನು ನೀಡುವಾಗ ತಾವು ಸಹಿ ಮಾಡಿಸಿಕೊಂಡಿರುತ್ತೀರಿ ಅಂದರೆ ಸರಿಯಲ್ಲ.

3) ತೋಟಗಾರಿಕೆಯವರು ವರದಿಯ ಪ್ರಕಾರ ಪರಿಹಾರದ ಹಣವನ್ನು ನೀಡಿಲ್ಲ ಅಂದರೆ ಸರಿಯಲ್ಲ. ತೋಟಗಾರಿಕೆ ಮರಗಳಿಗೆ ಅವಾರ್ಡ್ ಮಾಡುವಾಗ ದೊಡ್ಡ ಮರಗಳನ್ನು ಸಣ್ಣವು ಎಂದು ಹೇಳಿರುತ್ತೀರಿ ಅಂದರೆ ಸರಿಯಲ್ಲ. ಈ ಕೇಸಿನ ಬಗ್ಗೆ ಯಾವುದೇ ಮಾಹಿತಿ ಇಲ್ಲದಿದ್ದರು ಸಹ ಎಸ್ ಎಲ್ ಎ ಓ ರವರ ಮಾತನ್ನು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಅಂದರೆ ಸರಿಯಲ್ಲ.

**(**ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು**)**

ಓ**.**ಹೇ**.**ಕೇ**.**ಸರಿ ಇದೆ**.**

**1** ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು